ಅಧ್ಯಕ್ಷರು:– ಅದು ತುಂಬಾ essential, ಅದನ್ನು ಮಾಡಿ. ಇದು ಸರ್ಕಾರದ ಬದ್ಧತೆ ಇದೆ. ಅದನ್ನು implement ಮಾಡುವುದು ನಿಮ್ಮ ಜವಾಬ್ದಾರಿ. ಅದನ್ನು ಮಾಡಿ.

ಶಿಕ್ಷಣ ಸಂಸ್ಥೆ ನವೀಕರಣ

119(947); ಶ್ರೀ ಲೋಬೋ.ಜೆ.ಆರ್

ಅ) ಶಿಕ್ಷಣ ಸಂಸ್ಥೆಯನ್ನು ಅಲ್ಪಸಂಖ್ಯಾತರ ಸಮುದಾಯ ಸಂಸ್ಥೆ ಎಂದು ಘೋಷಿಸಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ?

ಆ) ಶೇಕಡಾ 75% ರಷ್ಟು ಅಲ್ಪಸಂಖ್ಯಾತ ಮಕ್ಕಳು ಇರಬೇಕೆಂದು ನೀಡಿರುವ ಸುತ್ತೋಲೆಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದರೂ, ಅದನ್ನು ಪಾಲಿಸದೇ ಇಲಾಖೆಯು ಅಲ್ಪಸಂಖ್ಯಾತ ಸಂಸ್ಥೆಗಳಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಅಲ್ಪಸಂಖ್ಯಾತರ ಸಂಸ್ಥೆ ಎಂದು ಇಲಾಖೆ ಪರಿಗಣಿಸದ ನಂತರ ಪ್ರತಿ ವರ್ಷ ಅದನ್ನು ನವೀಕರಿಸಲು ಕೇಳುವ ಉದ್ದೇಶ ಏನು? ಇದರಿಂದ ಪ್ರತಿ ವರ್ಷ ಅಲ್ಪಸಂಖ್ಯಾತರ ಸಂಸ್ಥೆಗಳು ಇಲಾಖೆಗೆ ಅಲೆದಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) "ಆದೇಶ ಸಂಖ್ಯೆ:ಇಡಿ22ಎಂ.ಪಿ.ಎಸ್.2005 ದಿನಾಂಕ:12.12.2006"ರ ಆದೇಶದಲ್ಲಿ ರಾಜ್ಯದಲ್ಲಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಸಂಬಂಧ ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು

ನಡೆಸುತ್ತಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ಆಯಾಯ ಅಲ್ಪಸಂಖ್ಯಾತ ಸಮುದಾಯದ ಜನಗಣತಿಗೆ ತಕ್ಕಂತೆ, ಆಯಾಯ ಅಲ್ಪಸಂಖಾತ ವರ್ಗದ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಕಾಪಾಡಿಕೊಳ್ಳಲು ಆಯಾಯ ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಕನಿಷ್ಠ ಅದೇ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳುವ ನಿಯಮಗಳನ್ನು ಪಾಲಿಸಿ ಭಾಷಾ.ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆ ಮಾಡಲಾಗಿದೆ.

"ಸರ್ಕಾರಿ ಆದೇಶ ಸಂಖ್ಯೆ:ಇಡಿ.27. ಮಾಹಿತಿ2012(ಭಾಗ–1) ಬೆಂಗಳೂರು ದಿನಾಂಕ:24.07.2012"ರ ಆದೇಶದಲ್ಲಿ ಶೇ75ರಷ್ಟು ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳು ಇರಬೇಕೆಂದು ತಿಳಿಸುತ್ತಾ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1) ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ/ಸೊಸೈಟಿ ರಿಜಿಸ್ಟ್ರೇಷನ್ ಕಾಯ್ದೆ ಪ್ರಕಾರ ನೊಂದಣಿಯಾಗಿರಬೇಕು ಹಾಗೂ ಕಾಲಕಾಲಕ್ಕೆ ನವೀಕರಿಸಿರತಕ್ಕದ್ದು.

2) ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದು, ಆಯಾಯ ಭಾಷಾ/ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಟ ಮೂರನೇ ಎರಡರಷ್ಟು ಇರಬೇಕು.

3) ಶಾಲೆಗಳನ್ನು ನಡೆಸುವ ಭಾಷಾ/ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಅಂತಹ ಸದಸ್ಯರು ಸಂಬಂಧಿಸಿದ ತಹಶೀಲ್ದಾರ್ ರವರಿಂದ ಜಾತಿ ಪ್ರಮಾಣ ಪತ್ರ ಪಡೆದಿರಬೇಕು.

4) ಶೈಕ್ಷಣಿಕ ವರ್ಷದಲ್ಲಿ ಅಲ್ಪಸಂಖ್ಯಾತ ಸಂಸ್ಥೆಯಲ್ಲಿ ಶೇ.75 ಕ್ಕಿಂತ ಕಡಿಮೆ ಇಲ್ಲದಂತೆ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ದಾಖಲಾಗಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

5) ಸಮಿತಿಯು ಆಗಿಂದಾಗ್ಗೆ ಸಭೆಗಳನ್ನು ನಡೆಸಿ ಇಂತಹ ಎಲ್ಲಾ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸತಕ್ಕದ್ದು.

ಮೇಲಿನ ಸರ್ಕಾರದ ಆದೇಶಕ್ಕೆ ಕರ್ನಾಟಕದ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳೆಂದು ಘೋಷಿಸುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿದೆ.

ಆ) ಸರ್ಕಾರದ ಸುತ್ತೋಲೆಗೆ ಆಡಳಿತ ಮಂಡಳಿಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದು, ಈ ಸಂಬಂಧ ಸಂಸ್ಥೆಗಳಿಂದ ದೂರುಗಳು ಬಂದಿದ್ದರೂ ಸಹ ತಡೆಯಾಜ್ಞೆ ಹಿನ್ನೆಲೆಯಲ್ಲಿ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ.

ಇ) ಅಲ್ಪಸಂಖ್ಯಾತ ಸಂಸ್ಥೆ ಘೋಷಣೆಯನ್ನು ಪ್ರತಿವರ್ಷ ನವೀಕರಿಸುವ ಅವಶ್ಯಕತೆ ಕಂಡುಬರುವುದಿಲ್ಲ ಈ ಸಂಬಂಧ ಯಾವುದೇ ಆದೇಶ ಹೊರಡಿಸಿರುವುದಿಲ್ಲ, ಆದರೇ ಶಾಲೆಯ ಮಾನ್ಯತೆಯನ್ನು ಸಾಮಾನ್ಯ ಶಾಲೆಗಳಂತೆಯೇ ಅಲ್ಪಸಂಖ್ಯಾತ ಸಂಸ್ಥೆಗಳು ಸಹ ಪ್ರತಿ ವರ್ಷ ನವೀಕರಿಸಿಕೊಳ್ಳಬೇಕಾಗುತ್ತದೆ.

ಶ್ರೀ ಜೆ.ಆರ್. ಲೋಬೋ:– ಮಾನ್ಯ ಅಧ್ಯಕ್ಷರೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ 2006ರಲ್ಲಿ ಅಲ್ಪಸಂಖ್ಯಾತರ ಸಂಸ್ಥೆಗಳನ್ನು ಘೋಷಿಸಿರುವಂತಹ ಆದೇಶ ಮತ್ತು 2012ರಲ್ಲಿ ಮಾಡಿರುವಂತಹ ಆದೇಶ ಇವೆ. 2012ರಲ್ಲಿ ಮಾಡಿರುವಂತಹ ಅದೇಶಕ್ಕೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಇದೆ. ಆದರೆ ಇವರು ಉತ್ತರದಲ್ಲಿ ತಡೆಯಾಜ್ಞೆ ಇರುವುದರಿಂದ ಯಾವುದೇ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದು ಹೇಳುತ್ತಾರೆ. ಮೊದಲನೇ ಪ್ರಶ್ನೆ ಏನೆಂದರೆ ತಡೆಯಾಜ್ಞೆ ಇರುವಾಗ ಮೊದಲನೇ ಆದೇಶವನ್ನಾದರೂ ಪಾಲಿಸಬೇಕಾಗಿತ್ತು. ಇವರು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಅಲ್ಪಸಂಖ್ಯಾತರ ಸಂಸ್ಥೆಗಳ ಗತಿಯೇನು? ಎರಡನೆಯ ಪ್ರಶ್ನೆ ಏನೆಂದರೆ ಇವರು ಏನೇ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು

ಹೇಳಿದರೂ, ಈಗಲೂ ಕೂಡ ಕಡತಗಳಲ್ಲಿ ಶೇಕಡ 75ರಷ್ಟು ಅಲ್ಪಸಂಖ್ಯಾತರ ಮಕ್ಕಳು ಶಾಲೆಯಲ್ಲಿ ಇರಬೇಕೆನ್ನುವುದರ ಬಗ್ಗೆ ಪರಿಶೀಲನೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಇದು ಉಚ್ಚ ನ್ಯಾಯಾಲಯದ ತಡೆಯಾಜ್ಞೆಯ ಸ್ಪಷ್ಟ ಉಲ್ಲಂಘನೆ. ಇನ್ನು ಮೂರನೇ ವಿಚಾರ ಅಲ್ಪಸಂಖ್ಯಾತ ಸಂಸ್ಥೆ ಘೋಷಣೆಯನ್ನು ಪ್ರತಿ ವರ್ಷ ನವೀಕರಿಸುವ ಅವಶ್ಯಕತೆ ಕಂಡು ಬರುವುದಿಲ್ಲವೆಂದು ಹೇಳಿದರೂ ಕೂಡ, ಶಾಲೆಯ ಮಾನ್ಯತೆಯನ್ನು ಸಾಮಾನ್ಯ ಶಾಲೆಗಳಂತೆಯೇ, ಅಲ್ಪಸಂಖ್ಯಾತ ಸಂಸ್ಥೆಗಳು ಸಹ ಪ್ರತಿ ವರ್ಷ ನವೀಕರಿಸಿಕೊಳ್ಳಬೇಕಾಗುತ್ತದೆ. ಈ ರೀತಿ ಹೇಳಿದರೆ ಏನರ್ಥ? ಅಲ್ಪಸಂಖ್ಯಾತ ಸಂಸ್ಥೆ ಘೋಷಣೆಯನ್ನು ಮಾಡುವಂತಹ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಆದರೆ ಮಾನ್ಯತೆಯನ್ನು ಪ್ರತಿ ವರ್ಷ ನವೀಕರಿಸಿಕೊಳ್ಳಬೇಕೆಂದು ಹೇಳುತ್ತಾರೆ.

ಅಧ್ಯಕ್ಷರು:– ನೀವು ಪ್ರಶ್ನೆ ಕೇಳಿ.

ಶ್ರೀ ಜೆ.ಆರ್. ಲೋಬೋ:– ಇದು ಸ್ಪಷ್ಟ ಉಲ್ಲಂಘನೆಯಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ತಿಳಿಸಬೇಕು.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ 2006ರಲ್ಲಿ ಏನು ಕಾಯಿದೆ ಬಂದಿತ್ತು, ಆ ಪ್ರಶ್ನೆ ಒಂದು ರೀತಿ ಸರಿ ಇದೆ. ಆ ನಂತರ 2012ರಲ್ಲಿ ಆಗಿರುವಂತಹ ಸರ್ಕಾರಿ ಆದೇಶದ ಮೇಲೆ ಉಚ್ಚ ನ್ಯಾಯಾಲಯದಲ್ಲಿ ಕೆಲವರು stay order ತೆಗೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ಉಚ್ಚನ್ಯಾಯಾಲಯದಲ್ಲಿ ಸ್ಪಷ್ಟ ತೀರ್ಪು ಬರದೆ ನಾವು ಏನಾದರೂ ಕ್ರಮ ತೆಗೆದುಕೊಂಡರೆ it may go for sub-judice. ಆದುದರಿಂದ ನಾವು ಅದರ ಬಗ್ಗೆ Legal opinion ಕೊಟ್ಟ ನಂತರ ನಾವು ಅದರಂತೆ ಕಾರ್ಯ ನಿರ್ವಹಿಸುತ್ತೇವೆ. ಅದರೊಳಗೆ ಈಗಾಗಲೇ 75% ಅಲ್ಪಸಂಖ್ಯಾತರ students ಇದ್ದರೆ ಅದನ್ನು ಅಲ್ಪಸಂಖ್ಯಾತರ ಸಂಸ್ಥೆ ಎಂದು ಪರಿಗಣಿಸಬೇಕೆಂದು 2012ರಲ್ಲಿ ಸರ್ಕಾರಿ ಆದೇಶ ಹೊರಡಿಸಿದ್ದಾರೆ. As against that order, they have preferred appeal in the High court. ಅಲ್ಲಿ stay order ಕೊಟ್ಟಿದ್ದಾರೆ. Stay order ಕೊಟ್ಟನಂತರ unless there is a specific order... ನಾವು ಏನೂ

ಮಾಡುವುದಕ್ಕಾಗುವುದಿಲ್ಲ. ನಾವು legal opinion ಕೇಳಿದ್ದೇವೆ. As Soon as we get the legal opinion, we are going to a adopt this.

ಶ್ರೀ ಜೆ.ಆರ್. ಲೋಬೋ:– National Commission for Minorities ಸ್ಪಷ್ಟವಾಗಿ ಹೇಳುತ್ತದೆ. ಯಾವುದೇ ಒಂದು ಸಂಸ್ಥೆಯನ್ನು Minority Institute ಎಂದು ಘೋಷಣೆ ಮಾಡಬೇಕಾದರೆ, ಅದರಲ್ಲಿರುವ ಮಕ್ಕಳ ಸಂಖ್ಯೆ ಮುಖ್ಯವಲ್ಲ. ಆಡಳಿತ ಮಂಡಳಿ ಯಾರು ನಡೆಸುತ್ತಾರೆ ಅದು ಮುಖ್ಯ. ಆದರೆ National Commission for Minorities ನವರು ಕೊಟ್ಟಿರುವಂತಹ ಆದೇಶ ಸಹ ಪಾಲನೆಯಾಗುತ್ತಿಲ್ಲ. ಮಾನ್ಯ ಸಚಿವರು ಅದರ ಬಗ್ಗೆ legal opinion ಕೇಳುತ್ತಿದ್ದೇವೆಂದು ಹೇಳಿದರು. ಅವರಿಗೆ legal opinion ಕೇಳುವುದಕ್ಕೆ ಎಷ್ಟು ಸಮಯ ಬೇಕು? ಈ ಸಂಸ್ಥೆಗಳ ಬಗ್ಗೆ ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು:– ಅವರು ಸುಪ್ರೀಂ ಕೋರ್ಟ್‌ನಲ್ಲಿ ಇದೆ ಎಂದು ಹೇಳಿದರಲ್ಲ.

ಶ್ರೀ ಜೆ.ಆರ್. ಲೋಬೋ:– ಅಲ್ಲ, ಅದು ಉಚ್ಚ ನ್ಯಾಯಾಲಯದಲ್ಲಿ ಇದೆ.

ಅಧ್ಯಕ್ಷರು:– ಹೌದು, ಸಚಿವರೆ ಅದು ಹೈಕೋರ್ಟ್‌ನಲ್ಲಿ ಇದೆಯಲ್ಲ, ಬೇಗ ಅದರ ಬಗ್ಗೆ arguments ಮಾಡಿಸಿ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಅಧ್ಯಕ್ಷರೆ, ನಾವು legal opinion ಕೇಳಿದ್ದೇವೆ. We will get the legal opinion within eight days. ತಕ್ಷಣ ಅವರಿಗೆ ವಿಚಾರ ತಿಳಿಸುತ್ತೇವೆ.